PW- 01

ಇಂದು ದಿಃ20.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ವಕೀಲರಿಂದಃ

ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುವ ಧನುಷ ನನ್ನ ಅಣ್ಣನ ಮಗ. ಅವರು ಅಪಘಾತವಾಗದ ಸ್ಥಳದಲ್ಲಿರಲಿಲ್ಲ. ಅಪಘಾತವಾದ ಕೂಡಲೇ ನನಗೆ ಪ್ರಜ್ಞೆ ಇತ್ತು ಎಂದರೆ ಸರಿ. ಅಪಘಾತವಾದ ನಂತರ ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಯಾವ ರೀತಿ ಗಾಯಗಳಾಗಿವೆ ಎಂದು ಹೇಳಿ ಬರೆಸಿದ್ದೇನೆ. ನಾನು ನಡೆದುಕೊಂಡು ಹೋಗುತ್ತಿದ್ದಾಗ ಬೈಕ್ ಸವಾರ ಹಿಂದಿನಿಂದ ಬಂದು ನನಗೆ ಅಪಘಾತಪಡಿಸಿದ್ದಾರೆ. ನನಗೆ ಅಪಘಾತಪಡಿಸಿದ ಬೈಕ್ ಸವಾರ ಸ್ಥಳದಲ್ಲಿದ್ದನು.

ಅಪಘಾತದ ಬಗ್ಗೆ ಮಾಹಿತಿಯನ್ನು ನಾನೇ ಧನುಷಗೆ ಹೇಳಿದ್ದೆ. ನನಗೆ ಅಪಘಾತ ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸ ಗೊತ್ತಿಲ್ಲ ಎಂದರೆ ಸರಿ. ಅಪಘಾತಪಡಿಸಿದ ವಾಹನದ ಸಂಖ್ಯೆಯನ್ನು ನಾನೇ ನೋಡಿದ್ದೇನೆ. ಅದೇ ವಾಹನದ ಸಂಖ್ಯೆಯನ್ನು ನಾನು ಆಸ್ಪತ್ರೆಯಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿ. ಅಪಘಾತಪಡಿಸಿದ ವಾಹನದ ನೊಂದಣಿ ಸಂಖ್ಯೆ ಈಗ ಹೇಳಲು ಗೊತ್ತಿಲ್ಲ ಅದು ಸ್ಪ್ಲೆಂಡರ್ ಗಾಡಿ. ನಾನು ವಿದ್ಯಾಭ್ಯಾಸ ಮಾಡಿಲ್ಲ ಆದ್ದರಿಂದ ಅಪಘಾತಪಡಿಸಿದ ವಾಹನದ ಸಂಖ್ಯೆ ಹೇಳಲು ಗೊತ್ತಿಲ್ಲ. ನನಗೆ ಅಪಘಾತಪಡಿಸಿದೆ ಎಂದು ಹೇಳಲಾದ ವಾಹನ ನನಗೆ ಅಪಘಾತ ಮಾಡಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಣ್ಣನ ಮಗ ಧನುಷ ಪೊಲೀಸರೊಡನೆ ಸೇರಿ ಸುಳ್ಳು ಕೇಸು ದಾಖಲಿಸಿದ್ದಾರೆ ಆದ್ದರಿಂದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಜಗದೀಶ ಎಂಬ ವ್ಯಕ್ತಿ ವಾಹನ ಓಡಿಸುತ್ತಿರಲಿಲ್ಲ ಆದರೆ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಕೇಸು ದಾಖಲಿಸಿದ್ದೇವೆ

ಎಂದರೆ ಸರಿಯಲ್ಲ. ಅಪಘಾತಪಡಿಸಿದ ವ್ಯಕ್ತಿಯ ಹೆಸರು ಸಹ ಗೊತ್ತಿಲ್ಲದಿದ್ದ ಕಾರಣ ತದನಂತರ ಆ ವ್ಯಕ್ತಿಯ ಹೆಸರನ್ನು ದಾಖಲೆಗಳಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಆ ನಂತರ ಮಡಿಕೇರಿ ಸರ್ಕಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಆ ನಂತರ ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯಲ್ಲಿ ಪೂರ್ತಿ ಚಿಕಿತ್ಸೆ ಮಾಡಿದ್ದೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ.

ನನ್ನ ಜನ್ಮದಿನಾಂಕ 01.09.1976. ನಾನು ಕೂಲಿ ಕೆಲಸ ಮಾಡುತ್ತಿದ್ದೆ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ವೈದ್ಯಕೀಯ ವೆಚ್ಚವನ್ನು ಆರೋಗ್ಯ ಭಾಗ್ಯ ಯೋಜನೆಯಡಿ ಪಡೆದುಕೊಂಡಿಲ್ಲ ನಾನೇ ಸ್ವತಃ ಪಾವತಿಸಿದ್ದೇನೆ. ಈಗ್ಗೆ ಸುಮಾರು 2 ತಿಂಗಳ ಹಿಂದೆ ತೇಜಸ್ವೀನಿ ಆಸ್ಪತ್ರೆಗೆ ಹೋಗಿದ್ದೇನೆ. ನಾನು ಹೇಳಿದಂತೆ ಯಾವುದೇ ಅಪಘಾತವಾಗಿಲ್ಲದ ಕಾರಣ ಪಿರಿಯಾಪಟ್ಟಣ ಆಸ್ಪತ್ರೆ ಹಾಗೂ ಮಡಿಕೇರಿ ಆಸ್ಪತ್ರೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಧನುಷ ಪೊಲೀಸರೊಡನೆ ಸೇರಿ ಪ್ರಕರಣವನ್ನು ಸೃಷ್ಟಿಸಿರುವುದರಿಂದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನಗೆ ಅಳವಡಿಸಿರುವ ಒಳಜೋಡಣೆಯನ್ನು ಇನ್ನು ತೆಗೆದಿಲ್ಲ. ಮೊದಲಿನಂತೆ ಈಗಲೂ ಸಹ ಆರೋಗ್ಯವಾಗಿದ್ದರೂ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಬಾರದೆಂದು ವೈದ್ಯರು ಸಲಹೆ ನೀಡಿಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**